ರಾಜ ಅಶಿಕಾಗ ಯೋಶಿಮಿಟ್ಸು ಬಳಿ. ಅವನ ಬಳಿ ಟೀ ಕುಡಿಯಲೆಂದು ಒಂದು ವಿಶಿಷ್ಟವಾದ ಮಣ್ಣಿನ ಬಟ್ಟಲು ಇತ್ತಂತೆ. ತಾವು ಕೊಟ್ಟ ಮಾತನ್ನು ಮುರಿಯುವುದು, ಜನರ ನಂಬಿಕೆಗಳನ್ನು ಮುರಿಯುವುದು, ತಮ್ಮದೇ ಸಿದ್ಧಾಂತಗಳನ್ನು ಮುರಿಯುವುದು ಇವೆಲ್ಲವೂ ಪ್ರಭುತ್ವದಲ್ಲಿರುವವರ ಅತೀ ಸಾಮಾನ್ಯ ಗುಣಲಕ್ಷಣಗಳು. ಅದನ್ನೆಲ್ಲಾ ಆತ ಮುರಿದಿದ್ದನೋ ಇಲ್ಲವೋ ಗೊತ್ತಿಲ್ಲ. ಆದರೆ, ಒಂದು ದಿನ ತನ್ನ ಅತ್ಯಂತ ಇಷ್ಟದ ಆ ವಿಶಿಷ್ಟ ಟೀ ಬಟ್ಟಲನ್ನಂತೂ ಗಡಿಬಿಡಿಯಲ್ಲಿ ಮುರಿದುಕೊಂಡುಬಿಟ್ಟ. ಅದಕ್ಕೆ ಬದಲಿ ಬಟ್ಟಲನ್ನು ಬಳಸಲು ಮನಸ್ಸಾಗದೇ ರಿಪೇರಿ ಮಾಡಿಕೊಡಿ ಎಂದು ಚೈನಾಕ್ಕೆ ಕಳುಹಿಸಿದ. ಏನೇ ಮುರಿದುಹೋದರೂ ಲೋಹದ ಹಾಳೆಗಳನ್ನು ಉಪಯೋಗಿಸಿ ಕೊಂಡಿಸುವುದು (ಸ್ಟ್ಯಾಪಲ್ ಮಾಡುವುದು) ಆಗ ಚೈನಾದಲ್ಲಿ ಬಳಕೆಯಲ್ಲಿತ್ತಂತೆ, ಅದನ್ನೇ ಬಟ್ಟಲಿನ ಮೇಲೂ ಪ್ರಯೋಗಿಸಲಾಯಿತು. ಆದರೆ, ಲೋಹದ ಹಾಳೆಗಳ ಅಂಗಿ-ಚಡ್ಡಿ ಧರಿಸಿ ಬಂದ ಆ ಬಟ್ಟಲನ್ನು ನೋಡಿದಾಗ ರಾಜನಿಗೆ ಚಂದವೂ ಅನ್ನಿಸಲಿಲ್ಲ, ಬಳಸಲೂ ಯೋಗ್ಯವಲ್ಲ ಎನ್ನಿಸಿತಂತೆ. ಕೊನೆಗೂ ಹಿತ್ತಲ ಗಿಡದಲ್ಲೇ ಮದ್ದು ಹುಡುಕುವ ಜ್ಞಾನೋದಯವಾಗಿ ಆ ರಾಜ ತನ್ನ ರಾಜ್ಯದಲ್ಲಿಯೇ ಇದ್ದ ಕಲಾವಿದರನ್ನು ಕರೆಸಿದನಂತೆ. 'ಆ ಬಟ್ಟಲಿನ ತುಂಡುಗಳನ್ನು ನಿಮ್ಮ ಪ್ರತಿಭೆ ಉಪಯೋಗಿಸಿ ಜೋಡಿಸಬೇಕು, ಅದು ಸುಂದರವಾಗಿಯೂ ಕಾಣಬೇಕು, ಆದರೆ ಅದು ಮುರಿದುಹೋಗಿತ್ತು ಎಂಬ ಕುರುಹುಗಳನ್ನು ಮರೆಮಾಚಬಾರದು' ಎಂದು ಸವಾಲೆಸೆದನಂತೆ. ಆಗ ಮೂಡಿದ ವಿಶಿಷ್ಟ ಕಲೆಯೇ ಈ 'ಕಿಂಟ್ಸುಗಿ'. ಮುರಿದ ಭಾಗಗಳನ್ನು ಚಿನ್ನದಿಂದ ಜೋಡಿಸುವ ಈ ಕಲೆ ಮರುಜೋಡಣೆಯಾಗಿರುವ ವಸ್ತುವಿನಲ್ಲಿ ಚಿನ್ನದ ಬಿರುಕುಗಳನ್ನು ಶಾಶ್ವತವಾಗಿಸುತ್ತದೆ. ಅದನ್ನು ನೋಡಿದಾಗಲೆಲ್ಲಾ ಆ ವಸ್ತು ಈಗಿರುವ ರೂಪಕ್ಕೆ ಬರುವ ಮುನ್ನ ಎಲ್ಲೆಲ್ಲಿ ಒಡೆದಿತ್ತು, ಎಲ್ಲೆಲ್ಲಿ ಮುರಿದಿತ್ತು ಎನ್ನುವುದು ಎಲ್ಲರಿಗೂ ಕಾಣಬೇಕು, ಆ ಮೂಲಕ ಇಂದು ನಾವಿರುವ ಸ್ಥಿತಿಗೆ ತಲುಪಲು ಎಷ್ಟು ಬಾರಿ ಹತಾಶರಾಗಿದ್ದೇವೆ, ಎಷ್ಟು ಬಾರಿ ಮನಸ್ಸುಗಳನ್ನು ಒಡೆದು ಜೋಡಿಸಿಕೊಂಡಿದ್ದೇವೆ, ಆ ಮತ್ತೆ ಕಟ್ಟಿಕೊಳ್ಳುವ ಚಿನ್ನದಂತಹ ಪ್ರಕ್ರಿಯೆಯಿಂದಲೇ ಮತ್ತೆ ಗೆದ್ದಿದ್ದೇವೆ ಎಂಬುದು ನೆನಪಾಗಿ ಯಾವತ್ತಿಗೂ ಸೋಲನ್ನು ವಿಶೇಷ ಪ್ರೀತಿಯಿಂದ ಸ್ವೀಕರಿಸುವ ಗುಣ ಬರಬೇಕು ಎನ್ನುವುದು 'ಕಿಂಟ್ಸುಗಿ'ಯ ಆಶಯ. ಬಿರುಕುಗಳನ್ನು, ಅಭಿಪ್ರಾಯ ಭೇದಗಳನ್ನು ಸಂಭ್ರಮಿಸಬೇಕು ಎಂಬುದು ಖಂಡಿತವಾಗಿಯೂ ಹಿಂದೆಂದಿಗಿಂತಲೂ ಇಂದಿಗೆ ಅಗತ್ಯವಾಗಿದೆ ಅಲ್ಲವೇ?

ಕೊರತೆ ಕಂಡ ಕೂಡಲೇ ಹೊಸದರತ್ತ ಮುಖ ಮಾಡದೇ, ಇರುವುದನ್ನೇ ರಿಪೇರಿ ಮಾಡುವುದು ಶ್ರೇಷ್ಠ ಎಂಬುದರ ಬಗ್ಗೆ ಭಾರತೀಯ ಇತಿಹಾಸದಲ್ಲೂ ಉಲ್ಲೇಖಗಳಿವೆ. ಅನೇಕ ಪುರಾತನ ಭಾರತೀಯ ದೇವಾಲಯಗಳು, ಅರಮನೆಗಳು ಮತ್ತು ಕಟ್ಟಡಗಳನ್ನು ಅಭ್ಯಸಿಸಿರುವ ಇತಿಹಾಸಕಾರರಾದ ಅನ್ನಪೂರ್ಣ ಗರಿಮೆಲ್ಲಾ ಅವರೇ ಹೇಳುವಂತೆ ಭಾರತದ ಅನೇಕ ಸಾಮ್ರಾಜ್ಯಗಳು ಜೀರ್ಣೋದ್ಧಾರವನ್ನು ಅಂದರೆ ರಿಪೇರಿ ಮಾಡಿ ಮತ್ತೆ ಮರುಬಳಕೆ ಮಾಡುವ ಪ್ರಕ್ರಿಯೆಯನ್ನು ಪ್ರೋತ್ಸಾಹಿಸಿದ್ದವಂತೆ. 'ಜೀರ್ಣೋದ್ಧಾರ' ಎಂಬ ಪದದಲ್ಲಿ 'ಉದ್ಧಾರ' ಎಂದರೆ 'ಸಾಲ' ಎಂಬ ಅರ್ಥವೂ ಇದೆಯಂತೆ. ರಿಪೇರಿಯಾಗಿ ನಳನಳಿಸುವ ಯಾವುದೇ ವಸ್ತು, ಕಟ್ಟಡ, ದೇವಾಲಯಗಳು ಹಿಂದಿನವರಿಂದ ನಾವು ಪಡೆದಿರುವ ಅಮೂಲ್ಯವಾದ ಸಾಲ ಎಂಬುದನ್ನು ಅದು ಪ್ರತಿನಿಧಿಸುತ್ತದಂತೆ. 'ಮಯಮತಂ' ಎಂಬ ಹನ್ನೊಂದನೇ ಶತಮಾನದ ವಾಸ್ತುಶಾಸ್ತ್ರಕ್ಕೆ ಸಂಬಂಧಿಸಿದ ಗ್ರಂಥದಲ್ಲಿ ಈ ಜೀರ್ಣೋದ್ಧಾರದ ಬಗ್ಗೆಯೇ ಒಂದಿಡೀ ಅಧ್ಯಾಯವಿದ್ದರೆ ಅದಕ್ಕಿಂತಲೂ ಹಳೆಯದಾದ 'ಅಗ್ನಿ ಪುರಾಣ'ದಲ್ಲಿ ಎರಡು ಅಧ್ಯಾಯಗಳನ್ನು 'ಜೀರ್ಣೋದ್ಧಾರ'ಕ್ಕಾಗಿಯೇ ಮೀಸಲಿಟ್ಟಿದ್ದಾರಂತೆ. ಒಟ್ಟಿನಲ್ಲಿ ನಮ್ಮ ಪೂರ್ವಜರೂ ಕೂಡಾ ತಮಗೇ ಗೊತ್ತಿಲ್ಲದಂತೆ ಸರ್ವಿಸ್ ಸೆಂಟರುಗಳನ್ನು ನಡೆಸುತ್ತಿದ್ದರು ಎಂದು ಈ ಮೂಲಕ ಅಂದುಕೊಳ್ಳಬಹುದು.

ಇನ್ನು ವೈಯಕ್ತಿಕವಾಗಿ ಬರುವುದಾದರೆ ರಿಪೇರಿಗೆ ಸಂಬಂಧಪಟ್ಟಂತೆ ನನ್ನ ನೆನಪುಗಳ ಸರಣಿ ಶುರುವಾಗುವುದು ಒಂದು ವಿಡಿಯೋ ಗೇಮಿನಿಂದ. ನಾನಾಗ ಎರಡನೇ ತರಗತಿಯಿರಬೇಕು. ಶಿವಮೊಗ್ಗ ಅಡಿಕೆ ಮಂಡಿಗೆ ಅಡಿಕೆ ಹಾಕಲು ಹೋದ ದೊಡ್ಡಪ್ಪ ಬರುವಾಗ ನನಗೊಂದು ವಿಡಿಯೋ ಗೇಮ್